# ನಿವೇದನೆ

## ಕಾಡಾನೆಗಳೇಕೆ ನಾಡಿಗೆ ನುಗ್ಗುತ್ತವೆ?

ರಾಜ್ಯದಲ್ಲಿ 1.10 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶ ಒತ್ತುವರಿಯಾಗಿದೆ. ಹಲವೆಡೆ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿ ನಿವೇಶನಗಳನ್ನು ಮಾಡಲಾಗಿದೆ; ಕೆಲವೆಡೆ ಗಣಿಗಾರಿಕೆಯನ್ನೂ ನಡೆಸಲಾಗುತ್ತಿದೆ. ಪ್ರವಾಸೋದ್ಯಮದ ಹೆಸರಿನಲ್ಲಿ ಸಾಕಷ್ಟು ರೆಸಾರ್ಟ್‌ಗಳೂ ತಲೆ ಎತ್ತಿವೆ.

ರಾಜ್ಯದಲ್ಲಿ ಮಾನವ ಮತ್ತು ಪ್ರಾಣಿಗಳ ನಡುವಣ ಸಂಘರ್ಷದಲ್ಲಿ ಈ ವರ್ಷ ಒಟ್ಟು 27 ಮಂದಿ ಮೃತಪಟ್ಟಿದ್ದಾರೆ. ಬಹುತೇಕ ಪ್ರಕರಣಗಳು ಆನೆಗಳ ದಾಳಿಯದ್ದೇ. ಕಾಡಂಚಿನ ಹಳ್ಳಿಗಳಿಗೆ ನುಗ್ಗುವ ಆನೆಗಳು ರೌದ್ರಾವತಾರ ತಾಳಿ ಮನುಷ್ಯರನ್ನು ಕೊಲ್ಲುತ್ತಿರುವುದು ಇದೇನೂ ಹೊಸದಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ಇಂತಹ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿವೆ. ಬೆಂಗಳೂರು ಗ್ರಾಮಾಂತರ, ಹಾಸನ, ಕೊಡಗು, ಚಿಕ್ಕಮಗಳೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರತಿ ವಾರವೂ ಒಂದಲ್ಲ ಒಂದು ಕಡೆ ಕಾಡಾನೆ ದಾಳಿಯ ಹಾಗೂ ಆತಂಕ ಸೃಷ್ಟಿಸಿದ ಪ್ರಕರಣಗಳು ವರದಿಯಾಗುತ್ತಿವೆ. ಕಾಡಾನೆಗಳು ನಾಡಿಗೆ ನುಗ್ಗದಂತೆ ತಡೆಯಲು ಸುಮಾರು 100 ಕೋಟಿ ರೂಪಾಯಿಯ ಯೋಜನೆಯನ್ನು ನಾಗರಹೊಳೆಯಲ್ಲಿ ರೂಪಿಸಿದ್ದು, ಈಗಾಗಲೆ 20 ಕೋಟಿ ರೂಪಾಯಿ ಬಿಡುಗಡೆ ಮಾಡಿರುವುದಾಗಿ ಅರಣ್ಯ ಸಚಿವ ಬಿ.ರಮಾನಾಥ ರೈ ಹೇಳಿದ್ದಾರೆ. ಈ ಯೋಜನೆಯಡಿ ಕಾಡಿನ ಅಂಚಿನಲ್ಲಿ ಕಂದಕಗಳನ್ನು ನಿರ್ಮಿಸುವುದು, ಸೌರವಿದ್ಯುತ್ ಬೇಲಿ ಹಾಕುವುದು ಮುಂತಾದ ಕೆಲಸಗಳು ನಡೆದಿವೆ ಎಂದೂ ಸಚಿವರು ಹೇಳಿದ್ದಾರೆ.

ರಾಜ್ಯದ ಅರಣ್ಯಗಳಲ್ಲಿ ಹೆಚ್ಚೆಂದರೆ 6200 ಆನೆಗಳಿವೆ. ಕಾಡಿನಲ್ಲಿ ಸ್ವಚ್ಛಂದವಾಗಿ ವಿಹರಿಸಿಕೊಂಡು ಇರಬೇಕಾದ ಈ ಆನೆಗಳು ಸುತ್ತಮುತ್ತಲ ಹಳ್ಳಿಗಳಿಗೆ, ಪಟ್ಟಣಗಳಿಗೆ ಏಕೆ ನುಗ್ಗುತ್ತವೆ? ಉತ್ತರ ಬಹಳ ಸ್ಪಷ್ಟವಿದೆ: ಆನೆ ವಾಸಿಸುವ ಕಾಡುಗಳಿಗೆ ನಾಗರಿಕರು ನುಗ್ಗಿ ಸಾವಿರಾರು ಎಕರೆ ಪ್ರದೇಶಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಕಾಡಂಚಿನ ಗ್ರಾಮಗಳಲ್ಲಿ ಕೃಷಿ ನಡೆಸಿ ಆನೆಗಳ ಆಹಾರಕ್ರಮಕ್ಕೂ ಸಂಚಕಾರ ತಂದಿದ್ದಾರೆ. ಸಾಮಾನ್ಯವಾಗಿ ಆನೆಗಳಿಗೆ ರಾಜ್ಯಗಳ ಗಡಿ ಇರುವುದಿಲ್ಲ. ಕರ್ನಾಟಕ, ಕೇರಳ, ತಮಿಳುನಾಡು ಎನ್ನದೆ ನೀಲಗಿರಿ ಅರಣ್ಯಶ್ರೇಣಿಯ ಉದ್ದಕ್ಕೂ ವರ್ಷ ಪೂರ್ತಿ ಸುತ್ತಾಡುವ ಆನೆಗಳು ತಮ್ಮದೇ ಆದ ಕಾರಿಡಾರ್‌ಗಳನ್ನು ಹೊಂದಿವೆ. ಮಳೆಗಾಲ, ಬೇಸಿಗೆಕಾಲ, ಚಳಿಗಾಲ ಮುಂತಾಗಿ ಆಯಾ ಋತುವಿಗೆ ತಕ್ಕಂತೆ ಅವುಗಳು ನೀರು, ಆಹಾರದ ಲಭ್ಯತೆಗಳನ್ನು ಗುರುತಿಸಿಕೊಂಡು ಅಡ್ಡಾಡುತ್ತವೆ. ಆ ಆನೆಗಳ ಕಾರಿಡಾರ್‌ಗಳಿಗೆ ನಾಗರಿಕರು ತಡೆ ಒಡ್ಡುವುದರಿಂದ ಅಥವಾ ಅವುಗಳನ್ನು ನಾಶಗೊಳಿಸುವುದರಿಂದ ಆನೆಗಳ ಜೀವನಪದ್ಧತಿ ತೊಂದರೆಗೆ ಒಳಗಾಗಿದೆ. ತಮ್ಮ ಜೀವನಚಕ್ರಕ್ಕೆ ಸಂಚಕಾರ ಬಂದಾಗ ಆನೆಗಳು ವಿಧಿಯಿಲ್ಲದೆ ಕಾಡಂಚಿನಲ್ಲಿರುವ ಹಳ್ಳಿಗಳಿಗೆ, ತೋಟಗಳಿಗೆ ನುಗ್ಗುತ್ತವೆ.

ಸರಕಾರವೇ ಒದಗಿಸಿರುವ ಅಂಕಿ ಅಂಶಗಳ ಪ್ರಕಾರ, ರಾಜ್ಯದಲ್ಲಿ 1.10 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶ ಒತ್ತುವರಿಯಾಗಿದೆ. ಹಲವೆಡೆ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿ ನಿವೇಶನಗಳನ್ನು ಮಾಡಲಾಗಿದೆ; ಕೆಲವೆಡೆ ಗಣಿಗಾರಿಕೆಯನ್ನೂ ನಡೆಸಲಾಗುತ್ತಿದೆ. ಪ್ರವಾಸೋದ್ಯಮದ ಹೆಸರಿನಲ್ಲಿ ಸಾಕಷ್ಟು ರೆಸಾರ್ಟ್‌ಗಳೂ ತಲೆ ಎತ್ತಿವೆ. ಈ ಹಿಂದೆ ಒತ್ತುವರಿಯಾಗಿದ್ದ 40 ಸಾವಿರ ಹೆಕ್ಟೇರ್ ಪ್ರದೇಶವನ್ನಷ್ಟೇ ಸರಕಾರ ತೆರವುಗೊಳಿಸಿದೆ. ಉಳಿದ ಪ್ರದೇಶಗಳ ತೆರವಿಗೆ ಸರಕಾರ ಏಕೆ ಮನಸ್ಸು ಮಾಡುತ್ತಿಲ್ಲ? ಈ ಬಗ್ಗೆ ಕಳೆದ ಹಲವು ವರ್ಷಗಳಿಂದ ವಿಧಾನ ಮಂಡಲದಲ್ಲಿ ಚರ್ಚೆಗಳಾಗಿದ್ದರೂ, ಒತ್ತುವರಿ ತೆರವಿಗೆ ಸರಕಾರ ಸ್ಪಷ್ಟ ಕ್ರಮಗಳನ್ನು ಕೈಗೊಂಡಿಲ್ಲ. ಕೆಲವು ಜಿಲ್ಲೆಗಳಲ್ಲಿ ಕಾನೂನಿನ ತಾಂತ್ರಿಕ ಅಡಚಣೆಗಳ ನೆಪವೊಡ್ಡಿ ತೆರವು ಕ್ರಮಗಳನ್ನು ಮುಂದೂಡಲಾಗಿದೆ. ನೂರಾರು ಎಕರೆ ಅರಣ್ಯ ಒತ್ತುವರಿಯ ಮೂಲಕ ಕಾಫಿತೋಟಗಳನ್ನು ಮಾಡಿರುವ ಶ್ರೀಮಂತರು ಸರಕಾರದಿಂದಲೇ ವಿವಿಧ ಸೌಲಭ್ಯಗಳನ್ನೂ ಪಡೆಯುತ್ತಿದ್ದಾರೆ. ಈ ಶ್ರೀಮಂತರು ಸರಕಾರದ ಮೇಲೂ ನಿಯಂತ್ರಣ ಇಟ್ಟುಕೊಂಡಿದ್ದಾರೆ ಎನ್ನುವುದು ಈಗ ಗುಟ್ಟಿನ ಸಂಗತಿಯಲ್ಲ.

ಕಾಡಾನೆಗಳು ಊರಿಗೆ ದಾಳಿಯಿಡುವುದನ್ನು ತಡೆಯಲು ಸರಕಾರವು ಕಂದಕ, ಸೌರ ಬೇಲಿ ಮುಂತಾದ ಕ್ರಮಗಳನ್ನು ಕೈಗೊಳ್ಳುವುದಕ್ಕಿಂತ ಮುಖ್ಯವಾಗಿ, ಆನೆಗಳ ಜೀವನಶೈಲಿಗೆ ತಡೆ ಉಂಟಾಗದಂತೆ ನೋಡಿಕೊಳ್ಳಬೇಕು. ಅರಣ್ಯ ಒತ್ತುವರಿಯನ್ನು ಗಂಭೀರವಾಗಿ ಪರಿಗಣಿಸಿ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಅರಣ್ಯ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಿ, ನೈಸರ್ಗಿಕ ಅರಣ್ಯ ರಕ್ಷಣೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡರೆ ಕಾಡಾನೆಗಳು ನಾಡಿಗೆ ನುಗ್ಗುವುದನ್ನು ನಿಲ್ಲಿಸುತ್ತವೆ. ಕಾಡಾನೆಗಳ ದಾಳಿಗೆ ನಾವೇ ಪ್ರಚೋದನೆ ನೀಡಿ, ಅವುಗಳನ್ನು ದೂರುವುದರಲ್ಲಿ ಅರ್ಥವಿಲ್ಲ.

■ ಬಿ.ಎಂ.ಹನೀಫ್



ಈಶ್ವರ